ಸಾಕ್ಷಿಯನ್ನು ದಿನಾಂಕಃ 13-02-2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀಸವಾಲುಃ ಶ್ರೀಃ ಎಂ.ಎಸ್.ಟಿ/1 ಮತ್ತು 2 ನೇ ಪ್ರತಿವಾದಿ ಪರ ವಕೀಲರಿಂದಃ

1. ದಾವಾ ಸಿ-ಷೆಡ್ಯೂಲ್ ಸ್ಥಿರಾಸ್ತಿಯ ಬಾಬ್ತು ಈಗಲೂ ಭೂನ್ಯಾಯ ಮಂಡಳಿಯಲ್ಲಿ ವಿವಾದವು ತನಿಖೆಗೆ ಬಾಕಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ . ಭೂನ್ಯಾಯ ಮಂಡಳಿಯವರು ನೀಡಿದ ಆದೇಶದ ವಿರುದ್ಧ ಆ ಆಸ್ತಿಯ ಮಾಲೀಕರು ಮಾನ್ಯ ಉಚ್ಚನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ ವಿಚಾರ ನನಗೆ ಗೊತ್ತಿರುವುದಿಲ್ಲ . ಭೂನ್ಯಾಯ ಮಂಡಳಿಯ ಆದೇಶವನ್ನು ಮಾನ್ಯ ಉಚ್ಚನ್ಯಾಯಾಲಯವು ರದ್ದು ಗೊಳಿಸಿ ಮರುತನಿಖೆಗೆ ಆದೇಶ ನೀಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ . ಸಾಕ್ಷಿ ಮುಂದುವರಿದು ನಮ್ಮ ಮಾವ ಯಾವುದೇ ವಿಚಾರವನ್ನು ತಿಳಿಸಿರುವುದಿಲ್ಲ ಎಂದು ನುಡಿದಿರುತ್ತಾರೆ . ಭೂನ್ಯಾಯ ಮಂಡಳಿ ಅಥವಾ ಮಾನ್ಯ ಉಚ್ಚನ್ಯಾಯಾಲಯದಲ್ಲಿ ತನಿಖೆಯ ಕಾಲದಲ್ಲಿ ನಾನು ಹಾಜರಾಗಿರುವುದಿಲ್ಲ .

2. ಕಡಂದಲೆ ಗ್ರಾಮದಲ್ಲಿ ಸ್ಥಿರಾಸ್ತಿಗಳಿಗೆ ಸೆಂಟ್ಸ್ ಒಂದಕ್ಕೆ ಸುಮಾರು 70,000/- ರೂಗಳ ಮಾರುಕಟ್ಟೆ ಮೌಲ್ಯವಿರುತ್ತದೆ ಎಂದರೆ ಸರಿ . ಮುಂಡ್ಕೂರು ಗ್ರಾಮದಲ್ಲಿ ಸ್ಥಿರಾಸ್ತಿಗಳಿಗೆ ಸೆಂಟ್ಸ್ ಒಂದಕ್ಕೆ ಸುಮಾರು 2,50,000/- ರೂಗಳ ಮಾರುಕಟ್ಟೆ ಮೌಲ್ಯವಿರುತ್ತದೆ . ಈ ವಿಚಾರವನ್ನು ದಾವೆ ದಾಖಲು ಮಾಡುವ ಸಮಯದಲ್ಲಿ ನಮ್ಮ ವಕೀಲರಿಗೆ ತಿಳಿಸಿರುತ್ತೇನೆ . ನಮ್ಮ ಮಾವ ಸೀನಾ ಸಫಲಿಗ ಅವಿದ್ಯಾವಂತರು . ಮುಂಡ್ಕೂರು ಗ್ರಾಮದ ಸಿ-ಷಡ್ಯೂಲ್ ಆಸ್ತಿಗಳಿಗೆ ಸಂಬಂಧಿಸಿದಂತೆ ಭೂನ್ಯಾಯ ಮಂಡಳಿಯ ಆದೇಶದ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ . ದಾವಾ ಬಿ-ಷಡ್ಯೂಲ್ ಸ್ಥಿರಾಸ್ತಿಯ ಬಾಬ್ತು ನನ್ನ ಮಾವ ಯಾವುದೇ ಹೇಳಿಕೆಯನ್ನು ಭೂನ್ಯಾಯ ಮಂಡಳಿಯಲ್ಲಿ ನೀಡಿರುವುದಿಲ್ಲ

ಎಂದರೆ ಸಾಕ್ಷಿ ಡಿಕ್ಲರೇಷನ್ ಕೊಟ್ಟ ವಿಚಾರ ಗೊತ್ತು , ಆದರೆ ಹೇಳಿಕೆ ನೀಡಿದ್ದಾರೋ ಇಲ್ಲವೊ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ . ದಾವಾ ಬಿ-ಷಡ್ಯೂಲ್ ಸ್ಥಿರಾಸ್ತಿಗಳಲ್ಲಿ ನನಗೆ ಯಾವುದೇ ಪಾಲಗತಕ್ಕ ಆಸ್ತಿಗಳಲ್ಲ , ಅದು 1 ನೇ ಪ್ರತಿವಾದಿಯವರು ಗೇಣಿಗೆ ವಹಿಸಿಕೊಂಡು ಅವರಿಗೇ ತೀರ್ಮಾನವಾದ ಸ್ಥಳಗಳು ಎಂದರೆ ಸರಿಯಲ್ಲ . ಮುಂಡ್ಕೂರು ಗ್ರಾಮದ ಸ್ಥಿರಾಸ್ತಿಗಳ ಬಗ್ಗೆ ಭೂನ್ಯಾಯ ಮಂಡಳಿಯ ಆದೇಶದ ರದ್ದಾಗಿ ಮರುತನಿಖೆಗೆ ಆದೇಶ ನೀಡಿರುವ ಕಾರಣ ವಿವಾದವು ಈಗಲೂ ತನಿಖೆಗೆ ಬಾಕಿ ಇದೆ ಎಂದರೆ ನನಗೆ ಗೊತ್ತಿರುವುದಿಲ್ಲ .

(ಪ್ರತಿವಾದಿ ಸಂಖ್ಯೆ 2 to 8, 10 and 11 ರವರ ಪರ ವಕೀಲರು ಪಾಟೀಸವಾಲು ಇಲ್ಲವೆಂದು ತಿಳಿಸಿರುತ್ತಾರೆ .)

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-
ಪ್ರ ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ (C/C)